ಚಿಕಿತ್ಸೆ ಸಿಗುತ್ತೆ ಅನ್ನೋದನ್ನು ನಾನು ವಿಚಾರಿಸುತ್ತೇನೆ. ನೀವು ನಿಮ್ಮ ಊರಿಗೆ ಹೋಗಿ. ಚಿಂತಾಮಣಿಗೆ ಬರೋದಾದರೆ ಹೇಳಿ. ನಮ್ಮ ತೋಟದ ಮನೆಯಲ್ಲಿ ಇರೋಕೆ ವ್ಯವಸ್ಥೆ ಮಾಡ್ತೀನಿ. ಈಗ ನೀವು ಉಪೇಕ್ಷೆ ಮಾಡಿದರೆ ಭವಿಷ್ಯದಲ್ಲಿ ಜನ ನಿಮ್ಮನ್ನು ಸಾಹಿತಿ, ವಿಚಾರವಾದಿ ಅನ್ನೋದಕ್ಕಿಂತ ಅಲ್ಝೈಮೈರ್ ರೋಗಿ ಎಂದೇ ನೆನಪಿಟ್ಟುಕೊಳ್ಳುತಾರೆ...' ಎಂದು ಅವರನ್ನು ಭೇಟಿಯಾಗಿ ಹೇಳಬೇಕು ಎಂದು ಮೃತ್ಯುಂಜಯ ನಿರ್ಧರಿಸಿದ.

* * *

ಸಾಹಿತ್ಯಸಿರಿ ಪ್ರಶಸ್ತಿ ಘೋಷಣೆ ಆಯಿತು. ಓದುಗರಿಗೆ ಅಷ್ಟೇನೂ ಪರಿಚಯವಿಲ್ಲದ, ಬಿಚ್ಚೋಲೆ ಗೌರಮ್ಮನಂತಿದ್ದ ಲೇಖಕಿಯೊಬ್ಬಳಿಗೆ ಪ್ರಶಸ್ತಿ ಸಿಕ್ಕಿತು!

ಸರ್ಕಾರದ ನಿರ್ಧಾರ ಕೇಳಿ ಸಾಹಿತ್ಯಾಭಿಮಾನಿಗಳು ಉರಿದು ಬಿದ್ದರು. ಆಯ್ಕೆ ಸಮಿತಿ ಸದಸ್ಯರು ಸರ್ಕಾರದ ತೀರ್ಮಾನ ವಿರೋಧಿಸಿದರು. ಸಮಿತಿ ರಚಿಸಿ, ಅರ್ಹರ ಹೆಸರು ಸೂಚಿಸುವಂತೆ ಕೇಳುವ ಬದಲು ಸರ್ಕಾರವೇ ತನಗೆ ಸರಿ ಕಂಡವರಿಗೆ ಪ್ರಶಸ್ತಿ ಕೊಡಬಹುದಿತ್ತು ಎಂದು ಸಮಿತಿ ಸದಸ್ಯರು ಅಸಮಾಧಾನ ಹೊರ ಹಾಕಿದರು. ಪ್ರಭುದೇವರ ಅಭಿಮಾನಿಗಳಿಗೆ ನಿರಾಸೆ ಆಯಿತು. ಪ್ರಮುಖ ಲೇಖಕರು ಮೌನಕ್ಕೆ ಜಾರಿದರು. ಕೆಲವರು ಸರ್ಕಾರದ ಸಾಹಿತ್ಯಿಕ ಸಂಸ್ಥೆಗಳ ಹುದ್ದೆಗಳಿಗೆ ರಾಜೀನಾಮೆ ಕೊಟ್ಟರು.

* * *

ಸಾಹಿತ್ಯಸಿರಿ ಪ್ರಶಸ್ತಿ ಕುರಿತು ಪ್ರಭುದೇವರ ಅಭಿಪ್ರಾಯ ತಿಳಿದುಕೊಳ್ಳುವ ಪ್ರಯತ್ನ ನಡೆಯಿತು. ಆದರೆ ಅವರು ಸಂಪರ್ಕಕ್ಕೆ ಸಿಕ್ಕಲಿಲ್ಲ. ಅವರು ಎಲ್ಲಿದ್ದಾರೆ ಎನ್ನುವುದು ಯಾರಿಗೂ ಗೊತ್ತೇ ಆಗಲಿಲ್ಲ! ಪತ್ರಿಕೆ, ಟೀವಿಗಳಿಗೂ ಅವರನ್ನು ಪತ್ತೆ ಮಾಡಲು ಆಗಲಿಲ್ಲ! ಅದೇ ವಾರ ಪ್ರೊ.ಪ್ರಭುದೇವ ಕಾಣೆಯಾಗಿದ್ದಾರೆ! ಎಂಬ ಸುದ್ದಿ ಕೇಳಿ ಬಂತು.

ಪ್ರಭುದೇವ ಅಜ್ಞಾತ ಸ್ಥಳದಲ್ಲಿ ಕುಳಿತು ಆತ್ಮಕಥೆ ಬರೆಯುತ್ತಿದ್ದಾರೆ ಎಂದು ಅವರ ಕುಟುಂಬದವರು ಹೇಳ್ತಿರೋದು ಸುಳ್ಳು. ಅವರ ಮಗ ಜಯದೇವ ಅಪ್ಪನನ್ನು ಹುಡುಕುತ್ತಿದ್ದಾರೆ ಎಂಬ ಮಾಹಿತಿಯನ್ನು ಟೀವಿಗಳು ಬಿತ್ತರಿಸಿದವು.

ಪ್ರೊ.ಪ್ರಭುದೇವ ಕಾಣೆಯಾಗಿದ್ದಾರೆ ಎಂಬ ಸುದ್ದಿ ರಾಜ್ಯದ ಉದ್ದಗಲದಲ್ಲಿ ಚರ್ಚೆಯಾಯಿತು. ಅವರನ್ನು ಪತ್ತೆ ಮಾಡುವುದಾಗಿ ಗೃಹ ಸಚಿವರು ಹೇಳಿದರು.

ಮೂರು ತಿಂಗಳು ಕಳೆದವು. ಪ್ರಭುದೇವರ ನಾಪತ್ತೆ ನಿಗೂಢ ಸ್ವರೂಪ ಪಡೆದುಕೊಂಡಿತು. ಅವರು ಬದುಕಿದ್ದರೆ ಈ ವೇಳೆಗೆ ಗೊತ್ತಾಗಬೇಕಿತ್ತು ಎಂದು ಪತ್ರಿಕೆ, ಟೀವಿಗಳು ಹೇಳಿದವು. ಅವರ ಬಗ್ಗೆ ಅಂತೆ ಕಂತೆಗಳ ಸುದ್ದಿಗಳು ಮತ್ತೆ ಮತ್ತೆ ಕೇಳಿ ಬಂದವು. ಸಾಹಿತ್ಯಾಭಿಮಾನಿಗಳ ಆತಂಕ ಹೆಚ್ಚಾಯಿತು. ಪ್ರಮುಖ ಟೀವಿ ಚಾನೆಲೊಂದು ಪ್ರಭುದೇವ ಅವರಿಗೆ ಅಲ್ಝೈಮೈರ್ ರೋಗ ಇತ್ತು. ಹೈದರಾಬಾದ್‌ನ ಅರವಿಂದಂ ನಾಯ್ಡು ಎಂಬ ಡಾಕ್ಟರ ಸಲಹೆ ಮೇರೆಗೆ ನಿಗೂಢ ಸ್ಥಳದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂಬ ಸುದ್ದಿ ಬಿತ್ತರ ಮಾಡಿತು!

'ಮೂರು ತಿಂಗಳ ಹಿಂದೆ ಅಪ್ಪ ನನ್ನ ಮನೆಗೆ ಬಂದಿದ್ದರು. ಒಂದು ಬೆಳಿಗ್ಗೆ ಮನೆ ಮುಂದೆ ಕೂತು ಪೇಪರ್ ಓದುತ್ತಿದ್ದರು. ನೀರು ತಂದು ಕೊಡುವಂತೆ ನನ್ನನ್ನು ಕೇಳಿದರು. ಮನೆಯೊಳಕ್ಕೆ ಹೋಗಿ ತರುವಷ್ಟರಲ್ಲಿ ಅವರು ಅಲ್ಲಿ ಇರಲಿಲ್ಲ...'

ಪೊಲೀಸರು ನನ್ನನ್ನು ಅರೆಸ್ಟ್ ಮಾಡ್ತಾರೆ ಅನ್ನೋ ಭಯ ಅವರಿಗೆ ಇತ್ತು. ಪೊಲೀಸರೇ ಅಪ್ಪನನ್ನು ಅರೆಸ್ಟ್ ಮಾಡಿರಬಹುದು ಎಂಬ ಅನುಮಾನ ನನಗಿದೆ ಎಂದು ಪ್ರಭುದೇವರ ಮಗಳು ದೇವಯಾನಿ ಟೀವಿಯೊಂದಕ್ಕೆ ಹೇಳಿದರು.

ದೇವಯಾನಿ ಹೇಳಿಕೆ ಪ್ರಭುದೇವರ ವಿದ್ಯಾರ್ಥಿಗಳು, ಅಭಿಮಾನಿಗಳನ್ನು ಕೆರಳಿಸಿತು. ಪ್ರೊಫೆಸರ್ ಅವರನ್ನು ಕೂಡಲೇ ಬಿಡುಗಡೆ ಮಾಡಿ ಎಂದು ಒತ್ತಾಯಿಸಲು ಆರಂಭಿಸಿದರು. ಪ್ರೊಫೆಸರ್ ಅವರು ವ್ಯವಸ್ಥೆಯನ್ನು, ರಾಜಕಾರಣಿಗಳನ್ನು ಟೀಕಿಸುತ್ತಿದ್ದರು. ಸರ್ಕಾರಗಳ ಬಗ್ಗೆ ಅವರಿಗೆ ಆಕ್ರೋಶವಿತ್ತು. ಸಮಾಜ ಬದಲಾಗಬೇಕು ಎಂದು ಹೇಳುತ್ತಿದ್ದರು ಎಂದು ರಾಜ್ಯದ ಕೆಲ ಪ್ರಮುಖ ಲೇಖಕರು ಹೇಳಿಕೆ ಕೊಟ್ಟು ಸರ್ಕಾರದ ಉಪೇಕ್ಷೆಯನ್ನು ಖಂಡಿಸಿದರು.

'ಪ್ರೊ. ಪ್ರಭುದೇವರನ್ನು ಬೀದರ್ ಬಸ್ ನಿಲ್ದಾಣದಲ್ಲಿ

